# ಸಾಮಾನ್ಯ ಕನ್ನಡ
# ದ್ವಿತೀಯ ಪಿಯುಸಿ
# ಪ್ರಶ್ನೆಪತ್ರಿಕೆ ಸ್ವರೂಪ

---

**I 'ಅ' ವಿಭಾಗ**

ಒಂದು ಅಂಕದ ಹತ್ತು ಪ್ರಶ್ನೆಗಳು — 1x10=10

(ಪದ್ಯದಿಂದ-4, ಗದ್ಯದಿಂದ-3, ನಾಟಕ-3)

**II 'ಆ' ವಿಭಾಗ**

ಎರಡು ಅಂಕಗಳ ಹದಿಮೂರು ಪ್ರಶ್ನೆಗಳಲ್ಲಿ ಹತ್ತಕ್ಕೆ ಉತ್ತರಿಸುವುದು — 2x10=20

(ಪದ್ಯದಿಂದ 5 ಪ್ರಶ್ನೆಗಳಿಗೆ 4, ಗದ್ಯ 4ರಲ್ಲಿ 3, ನಾಟಕ 4ರಲ್ಲಿ 3)

**III 'ಇ' ವಿಭಾಗ**

ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ ಮೂರು ಅಂಕಗಳ ಏಳು ಸಂದರ್ಭಗಳಲ್ಲಿ ನಾಲ್ಕಕ್ಕೆ ಉತ್ತರಿಸುವುದು. — 3x4=12

(ಪದ್ಯ 3ರಲ್ಲಿ 2, ಗದ್ಯ 2ರಲ್ಲಿ 1, ನಾಟಕ 2ರಲ್ಲಿ 1)

**IV 'ಈ' ವಿಭಾಗ**

ನಾಲ್ಕು ಅಂಕಗಳ ಹತ್ತು ಪ್ರಶ್ನೆಗಳಲ್ಲಿ ಏಳಕ್ಕೆ ಉತ್ತರಿಸುವುದು — 4x7=28

(ಪದ್ಯ 4ರಲ್ಲಿ 3, ಗದ್ಯ 3ರಲ್ಲಿ 2, ನಾಟಕ 3ರಲ್ಲಿ 2)

**V 'ಉ' ವಿಭಾಗ**

(ಅ) ಎರಡು ಪದ್ಯಗಳಲ್ಲಿ ಒಂದರ ಭಾವಾರ್ಥ ಬರೆಯುವುದು — 5x1=5
(ಒಂದು ಹಳೆಗನ್ನಡದಿಂದ, ಒಂದು ಆಧುನಿಕ ಕನ್ನಡದಿಂದ ಆಯ್ಕೆ)

(ಆ) ಭಾಷಾಭ್ಯಾಸ ಮತ್ತು ರಚನೆ ಹಾಗೂ ಪ್ರಯೋಗ ಚಂದನ
(ಪಠ್ಯದ ಜೊತೆಗೆ ಪ್ರಯೋಗ ಚಂದನದ ಅಭ್ಯಾಸದಲ್ಲಿರುವ ವಿಭಾಗಗಳಿಂದ ನೀಡುವುದು.)

(i) ಭಾಷಾಭ್ಯಾಸ: ಏಳು ಪ್ರಶ್ನೆಗಳಲ್ಲಿ ಆರಕ್ಕೆ ಉತ್ತರಿಸುವುದು. — 6x2=12

(ಇದುವರೆಗೂ 4 ಪ್ರಶ್ನೆ ನೀಡಿ 3ಕ್ಕೆ ಉತ್ತರಿಸುವಂತೆ ಕೇಳಲಾಗುತ್ತಿತ್ತು. ಈಗ ಏಳು ಪ್ರಶ್ನೆಗಳನ್ನು ನೀಡಿ 6ಕ್ಕೆ ಉತ್ತರಿಸಲು ಸೂಚಿಸುವುದು.

1. ದ್ವಿರುಕ್ತಿ ಪದಗಳು
2. ತತ್ಸಮ-ತದ್ಭವಗಳು
3. ದೇಶ್ಯ-ಅನ್ಯದೇಶ್ಯ ಪದಗಳು
4. ಸಮಾನಾರ್ಥ ಪದಗಳು
5. ನಾಮವಾಚಕಗಳು
6. ಕ್ರಿಯಾಧಾತು
7. ನಿಷೇದಾರ್ಥ ರೂಪಗಳು
8. ಜೋಡುನುಡಿಗಳು
9. ನಾನಾರ್ಥ ಪದಗಳು
10. ಅನುಕರಣ ವಾಚೀ ಶಬ್ಧಗಳು
11. ಗುಣವಾಚಕಗಳು
12. ವಿಭಕ್ತಿ ಪ್ರತ್ಯಯಗಳು

(ii) ಪ್ರಬಂಧ: ಎರಡು ಪ್ರಬಂಧಗಳನ್ನು ನೀಡಿ ಒಂದಕ್ಕೆ ಉತ್ತರಿಸುವುದು. — 5x1=5

ಪ್ರಯೋಗ ಚಂದನದಲ್ಲಿ ನೀಡಿರುವ ಪ್ರಬಂಧಗಳಲ್ಲಿ ಒಂದನ್ನು ನೀಡುವುದು. ಇನ್ನೊಂದನ್ನು ಪಠ್ಯದ ಹಿನ್ನೆಲೆಯಲ್ಲಿ ಅಥವಾ ಸಾಮಾನ್ಯ/ ಪ್ರಚಲಿತ ವಿದ್ಯಮಾನದಿಂದ ಆಯ್ಕೆ ಮಾಡುವುದು.
(ಎರಡು ಪ್ರಬಂಧಗಳಲ್ಲಿ ಒಂದನ್ನು ಬರೆಯುವುದು)

(iii) ಪತ್ರಲೇಖನ: ಕಛೇರಿ ಪತ್ರ/ ವ್ಯವಹಾರ ಪತ್ರ 4x1=4

ಅಥವಾ

ಖಾಸಗಿ ಪತ್ರ

(iv) ಗಾದೆ ಮಾತು ವಿಸ್ತರಣೆ: ಎರಡು ಗಾದೆ ನೀಡಿ ಒಂದಕ್ಕೆ ಉತ್ತರಿಸುವುದು 4x1=4
(ಪ್ರಯೋಗ ಚಂದನದಲ್ಲಿರುವ ಅಭ್ಯಾಸ ವಿಭಾಗದಿಂದ ಆಯ್ಕೆ ಮಾಡಿಕೊಳ್ಳುವುದು)

# ಸೂಚನೆ

ಮಾದರಿ ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವಾಗ ಗಮನಿಸಿ

1) ಅ, ಆ, ಇ,ಈ ವಿಭಾಗಗಳಲ್ಲಿ ಯಾವ ಬದಲಾವಣೆ ಇಲ್ಲ.

2) ಅಭ್ಯಾಸ ಪುಸ್ತಕ (ಪ್ರಯೋಗ ಚಂದನ) 10 ಅಂಕ ಹಾಗೂ ಇದುವರೆಗೂ ಇದ್ದ ಭಾಷಾಭ್ಯಾಸ ಹಾಗೂ ರಚನೆ ವಿಭಾಗದ 20 ಅಂಕಗಳು ಒಟ್ಟು ಸೇರಿ 30 ಅಂಕಗಳಿಗೆ ಮಾದರಿ ಪತ್ರಿಕೆಯ 'ಉ' ವಿಭಾಗದಲ್ಲಿ ಪ್ರಶ್ನೆಗಳನ್ನು ಸಿದ್ಧಪಡಿಸಬೇಕು.

3) ಈಗ ಹೆಚ್ಚುವರಿಯಾಗಿ ಕೇಳುವ ಪ್ರಶ್ನೆಗಳು ಅಭ್ಯಾಸ ಪುಸ್ತಕದಲ್ಲಿನ ಅಭ್ಯಾಸಗಳ ಮೇಲೆ ರಚಿತವಾಗಿರಬೇಕು.

'ಉ' ವಿಭಾಗದ ಪ್ರಶ್ನೆ ಪತ್ರಿಕೆ ರಚಿಸುವಾಗ ಹೀಗೆ ವಿಂಗಡಿಸಬಹುದು.

ಅ. ಭಾವಾರ್ಥ– ಎರಡರಲ್ಲಿ ಒಂದಕ್ಕೆ 5x1=5

ಆ. ಭಾಷಾಭ್ಯಾಸ– ಏಳು ಪ್ರಶ್ನೆಗಳನ್ನು ಕೊಟ್ಟು ಸೂಚನೆಗೆ ಅನುಗುಣವಾಗಿ ಆರಕ್ಕೆ ಬರೆಯುವಂತೆ ಕೇಳಬೇಕು.

1. ಪದಗಳ ಅರ್ಥ ಬರೆಯಿರಿ–ಎರಡು ಪದ 1x2=2
2. ನಾಮವಾಚಕಗಳನ್ನು ತಿಳಿಸಿರಿ–ಎರಡು ವಾಕ್ಯ 1x2=2
3. ಕಾಲಸೂಚಕ ಪ್ರತ್ಯಯ ತಿಳಿಸಿರಿ–ಎರಡು 1x2=2
4. ಧಾತು ರೂಪಗಳನ್ನು ಬರೆಯಿರಿ– ಎರಡು 1x2=2
5. ತತ್ಸಮಗಳಿಗೆ ತದ್ಭವ ಬರೆಯಿರಿ–ಎರಡು 1x2=2
6. ನುಡಿಗಟ್ಟುಗಳನ್ನು ವಾಕ್ಯದಲ್ಲಿ ಬಳಸಿರಿ–ಎರಡು 1x2=2
7. ನಿಷೇಧಾರ್ಥ ರೂಪ ಬರೆಯಿರಿ–ಎರಡು 1x2=2

ಇ. ಎರಡು ಪ್ರಬಂಧಗಳಲ್ಲಿ ಒಂದನ್ನು ಬರೆಯಿರಿ 1x5=5

1) ಪಠ್ಯದ ಹಿನ್ನೆಲೆ 2) ಸಾಮಾನ್ಯ

ಈ. ಕಛೇರಿ ಪತ್ರ/ ವ್ಯವಹಾರ ಪತ್ರ ಅಥವಾ ಖಾಸಗಿ ಪತ್ರ ಎರಡರಲ್ಲಿ ಒಂದನ್ನು ಬರೆಯುವುದು. 1x4=4

ಉ. ಗಾದೆ ಮಾತು– ಎರಡನ್ನು ನೀಡಿ ಒಂದಕ್ಕೆ ಬರೆಯುವುದು 1x4=4

'ಉ' ವಿಭಾಗದಲ್ಲಿ ಮೊದಲು ಇರುತ್ತಿದ್ದ ಪ್ರಶ್ನೆಗಳ ಸಂಖ್ಯೆ –10

ಉತ್ತರಿಸುತ್ತಿದ್ದ ಪ್ರಶ್ನೆಗಳು–06

ಈಗ ನೀಡಬೇಕಾಗಿರುವ ಒಟ್ಟು ಪ್ರಶ್ನೆಗಳ ಸಂಖ್ಯೆ– 15

ಉತ್ತರಿಸುವ ಪ್ರಶ್ನೆಗಳು–10

# ಪ್ರಶ್ನೆಗಳ ಸ್ವರೂಪ

1. ಒಂದು ಅಂಕದ ಪ್ರಶ್ನೆಗಳು, ನೇರವಾಗಿರುವ, ಖಚಿತವಾಗಿರುವ, ಒಂದು ಪೂರ್ಣ ವಾಕ್ಯ ರೂಪದಲ್ಲಿ ಉತ್ತರ ಬರೆಯುವಂತೆ ಇರಬೇಕು.
2. ಎರಡು ಅಂಕದ ಪ್ರಶ್ನೆಗಳು ಎರಡು ಮೂರು ವಾಕ್ಯಗಳಲ್ಲಿರುವ ಅಥವಾ ಮೂರು ನಾಲ್ಕು ಮುಖ್ಯಾಂಶವನ್ನು ಒಳಗೊಂಡ ಉತ್ತರವು ಬರುವಂತಿರಬೇಕು.
3. ಮೂರು ಅಂಕದ ಸಂದರ್ಭ ಸೂಚಿಸಿ ಬರೆಯುವ ಪ್ರಶ್ನೆಗಳು ಸಂದರ್ಭ, ಅರ್ಥ ಮತ್ತು ಭಾವವನ್ನು ನೇರವಾಗಿ ಸೂಚಿಸುವ ಉತ್ತರ ಬರೆಯುವಂತಿರಬೇಕು.
4. ನಾಲ್ಕು ಅಂಕದ ಪ್ರಶ್ನೆಗಳು ಸುಲಭವಾಗಿ ಅರ್ಥಗ್ರಾಹ್ಯವಾಗುವಂತಿರಬೇಕು ಮತ್ತು ವಿವರಣಾತ್ಮಕ ಉತ್ತರ ಬರೆಯುವಂತಿರಬೇಕು.
5. ಐದು ಅಂಕದ ಭಾವಾರ್ಥ ಪ್ರಶ್ನೆಯು ಪದ್ಯದ ಸಂದರ್ಭ, ಸಾರಾಂಶ, ಲೇಖಕರ ಆಶಯದ ಆಸ್ವಾದನೆಯನ್ನು ವಿವರಿಸುವಂತಿರಬೇಕು. ಕವಿ ಅಥವಾ ಲೇಖಕರ ಬಗ್ಗೆ ಎರಡು ಮೂರು ವಾಕ್ಯಗಳ ಪರಿಚಯವನ್ನು ಒಳಗೊಂಡಿರಬೇಕು.
6. ಭಾಷಾಭ್ಯಾಸ ಮತ್ತು ರಚನೆ ವಿಭಾಗದ ಪ್ರಶ್ನೆಗಳು ಪಠ್ಯದ ಹಾಗೂ ಪ್ರಯೋಗ ಚಂದನದ ಅಭ್ಯಾಸದ ಹಿನ್ನೆಲೆಯಲ್ಲಿ ಕೇಳಬೇಕು. ಅಭಿವ್ಯಕ್ತಿ, ಪ್ರಶಂಸೆಯನ್ನು ನಿರೀಕ್ಷಿಸುವಂತಿರಬೇಕು.

ಪ್ರಶ್ನೆಗಳು ಮತ್ತು ಅಂಕಗಳ ವಿತರಣೆ

| ಪಠ್ಯ | ನೀಡಬೇಕಾದ ಪ್ರಶ್ನೆ ಸಂಖ್ಯೆ | ಉತ್ತರಿಸಬೇಕಾದ ಪ್ರಶ್ನೆ ಸಂಖ್ಯೆ | ಅಂಕಗಳು |
|---|---|---|---|
| ಪದ್ಯಭಾಗ | 16 | 13 | 30 |
| ಗದ್ಯಭಾಗ | 12 | 09 | 20 |
| ನಾಟಕ ಭಾಗ | 12 | 09 | 20 |
| ಭಾಷಾಭ್ಯಾಸ, ರಚನೆ ಪ್ರಯೋಗ ಚಂದನ | 15(10) | 10(06) | 30(20) |
| ಒಟ್ಟು | 55(50) | 41((37) | 100(90) |

ಇದುವರೆಗೂ ನೀಡುತ್ತಿದ್ದ ಒಟ್ಟು ಪ್ರಶ್ನೆಗಳು–50
ಉತ್ತರಿಸುತ್ತಿದ್ದ ಪ್ರಶ್ನೆಗಳು–37
ಈಗ ನೀಡಬೇಕಾಗಿರುವ ಪ್ರಶ್ನೆಗಳು ಒಟ್ಟು–55
ಉತ್ತರಿಸಬೇಕಾದ ಪ್ರಶ್ನೆಗಳು–41

**ಉದಾಹರಣೆ - 1**

**V 'ಉ' ವಿಭಾಗ**

**(ಅ) ಕೆಳಗಿನ ಯಾವುದಾದರೊಂದು ಪದ್ಯಕ್ಕೆ ಭಾವಾರ್ಥ ಬರೆಯಿರಿ** 5x1=5

**41.** ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆಯಿತ್ತಡೆ
ನಿಮ್ಮನ್ನಿತ್ತೆ ಕಾಣಾ! ರಾಮನಾಥ.

ಅಥವಾ

**42.** ಕಣ್ಣೆದುರು ತೇಲಿಬರುತ್ತವೆ
ಕಂಡದ್ದು, ಕಲಿತದ್ದು, ಬೆಂಕಿಗೆ ಬಿದ್ದು ಪಾರಾದದ್ದು
ಪಗಡೆ ದಾಳದ ಜೊತೆಗೆ ಉರುಳಿ ಬಿದ್ದದ್ದು, ಬಿಚ್ಚಿದ
ಜಡೆಯ ನೆರಳಿನ ಕೆಳಗೆ ಭುಸುಗುಟ್ಟಿ ನರಳಿದ್ದು
ಕಾಡುಪಾಲಾಗಿ ಅಲೆದದ್ದು

**(ಆ) ಭಾಷಾಭ್ಯಾಸ–ರಚನೆ– ಪ್ರಯೋಗ ಚಂದನ**

**ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿರಿ.** 2x6=12

**43. ಈ ಪದಗಳಿಗೆ ನಾನಾರ್ಥ ಬರೆಯಿರಿ.**

ಅಡಿ, ಕಲಿ

**44. ಈ ವಾಕ್ಯದಲ್ಲಿನ ನಾಮವಾಚಕಗಳನ್ನು ಬರೆಯಿರಿ.**

ಅರ್ಜುನ ನಾನು ಸಂಕಟದಲ್ಲಿ ಸಿಕ್ಕಿದ್ದೇನೆ, ಏಕಲವ್ಯ ಮಹಾನ್ ಪರಾಕ್ರಮಿ ಎಂಬುದು ನಿಜ.

**45. ಈ ಪದಗಳಲ್ಲಿರುವ ಕಾಲಸೂಚಕ ಪ್ರತ್ಯಯ ಬರೆಯಿರಿ.**

ಅವನಿಂದ, ಸಿಂಹಕ್ಕೆ

**46. ಈ ಪದಗಳಲ್ಲಿರುವ ಧಾತು ರೂಪಗಳನ್ನು ಗುರುತಿಸಿರಿ.**

ಬರೆಯುವುದು, ಮಾಡುವುದು.

**47. ಈ ಪದಗಳ ತತ್ಸಮ ರೂಪ ಬರೆಯಿರಿ**

ಅಟವಿ, ಘೂಕ

**48. ಈ ನುಡಿಗಟ್ಟುಗಳನ್ನು ವಾಕ್ಯದಲ್ಲಿ ಬಳಸಿರಿ**

ರಾಮಬಾಣ, ಹಲ್ಲುಕಿಸಿ

**49. ಈ ಪದಗಳ ನಿಷೇದಾರ್ಥ ರೂಪ ಬರೆಯಿರಿ.**

ತಿನ್ನು, ಮಾಡು.

**(ಇ) ಯಾವುದಾದರೊಂದನ್ನು ಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ** 5x1=5

50. ಪರಿಸರ ರಕ್ಷಣೆ

51. ಏಡ್ಸ್ ಮಾರಕ ರೋಗ

**(ಉ) ಪತ್ರಲೇಖನ** 4x1=4

52. ನಿಮ್ಮ ಊರಿನ ರಸ್ತೆ ದುರಸ್ತಿ ಮಾಡಿಸುವ ಬಗ್ಗೆ ಅಧಿಕಾರಿಗಳಿಗೆ ಪತ್ರಬರೆದು ತಿಳಿಸಿ.

ಅಥವಾ

53. ನಿಮ್ಮ ಶೈಕ್ಷಣಿಕ ಪ್ರವಾಸದ ಅನುಭವಗಳನ್ನು ನಿಮ್ಮ ತಂದೆಗೆ ಪತ್ರದ ಮೂಲಕ ತಿಳಿಸಿ.

**(ಊ) ಗಾದೆ ಮಾತು**

**ಯಾವುದಾದರೂ ಒಂದು ಗಾದೆ ಮಾತು ವಿಸ್ತರಿಸಿ ಬರೆಯಿರಿ.** 4 x1=4

54. ಇಬ್ಬರ ಜಗಳ ಮೂರನೆಯವರಿಗೆ ಲಾಭ

ಅಥವಾ

55. ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.

**ಉದಾಹರಣೆ - 2**

**ಉ ವಿಭಾಗ**

**ಅ. ಒಂದು ಪದ್ಯದ ಭಾವಾರ್ಥ ಬರೆಯಿರಿ** 5x1=5

41. ಭವದನುಜನರುಣ ಜಲಮಂ
ಸವಿನೋಡಿದೆ ನಿನ್ನ ಬಲಜಲನಿಧಿಯಂ
ಸವಿನೋಡಿದೆ ನೀ ಕೊಳನಂ
ತವೆ ಪೀರ್ದು ಬಳಿಕ್ಕೆ ನಿನ್ನ ಸವಿಯಂ ನೋಳ್ಪೆಂ

42. ಬಂದಿರನಲೇ ಎಂದು ಪೊರಮಟ್ಟಡೋಹಿಡದಪ
ಳೆಂದೆಂಬರೊಯ್ಯನಳುತಿರಲಮಂಗಳಗರೆದ
ಳೆಂದೆಂಬರೊಳಗೊಳಗೆ ಮಗನ ಗುಣಮಂ ಹಲುಬುತಿರಲು ಬೈದಪಳೆಂಬರು।
ನಿಂದು ಬೆರಗಾಗಿ ಮರೆದಿರೆ ಕೆಲಸಗಳ್ಳಿಯಿವ
ಳೆಂದೆಂಬರೊಮ್ಮೊಮ್ಮೆ ಬಿಸುಸುಯ್ಯೆ ಬೇಸತ್ತ
ಳೆಂದೆಂಬರಂದು ಬೈವರು ಬೈದು ಬಡಿವರಾ ಮನೆಯವರು ಮಾನಿನಿಯನು॥

**ಆ) ಆರು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ.** 6x2=12

43. **ಸಮಾನಾರ್ಥ ಪದಗಳನ್ನು ಬರೆಯಿರಿ.**

ಕಸವರ, ಇಳೆ

44. **ಇವುಗಳಿಗೆ ತದ್ಭವ ರೂಪವನ್ನು ಬರೆಯಿರಿ.**

ಕಸ್ತೂರಿ, ವಿದ್ಯೆ

45. **ನಾನಾರ್ಥ ಪದಗಳನ್ನು ಬರೆಯಿರಿ.**

ಅಂಬರ, ಕವಿ

46. **ಈ ದ್ವಿರುಕ್ತಿಗಳನ್ನು ವಾಕ್ಯದಲ್ಲಿ ಬಳಸಿ.**

ಕಣಕಣ, ದೆಸೆದೆಸೆಗೆ

47. **ಇವುಗಳಿಗೆ ನಿಷೇಧಾರ್ಥ ಬರೆಯಿರಿ.**

ಮಾಡು, ಓಡು

48. **ಈ ನುಡಿಗಟ್ಟುಗಳನ್ನು ವಾಕ್ಯದಲ್ಲಿ ಬಳಸಿ.**

ತಲೆದೂಗು, ಒಣವೇದಾಂತ

49. **ಎರಡು ರೂಢನಾಮ ಪದಗಳನ್ನು ಬರೆಯಿರಿ.**

**ಇ) ಒಂದನ್ನು ಕುರಿತು ಪ್ರಬಂಧ ಬರೆಯಿರಿ.** 5x1=5

50. ವಿದ್ಯಾರ್ಥಿ ಬದುಕು
51. ಕ್ರೀಡೆಗಳ ಮಹತ್ವ

**ಈ) ಒಂದನ್ನು ಕುರಿತು ಪತ್ರ ಬರೆಯಿರಿ.** 4x1=4

52. ವಾರ್ಷಿಕ ಪರೀಕ್ಷೆಯ ಸಿದ್ಧತೆ ಕುರಿತು ನಿಮ್ಮ ತಂದೆಗೆ ಪತ್ರ ಬರೆಯಿರಿ.
53. ಬೀದಿನಾಯಿಗಳನ್ನು ನಿಯಂತ್ರಿಸಲು ಕೋರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆಯಿರಿ.

**ಉ) ಒಂದನ್ನು ಕುರಿತು ಗಾದೆ ಮಾತನ್ನು ವಿಸ್ತರಿಸಿ.** 4x1=4

54. ತುಂಬಿದ ಕೊಡ ತುಳುಕುವುದಿಲ್ಲ.
55. ಆಳಾಗಬಲ್ಲವನು ಅರಸಾಗಬಲ್ಲ.